

# ಬಾಯಿ ವಾಸನೆಯೇ! ಮೌತ್‌ವಾಶ್ ಬಳಸಿ

**ಬಾಯಿ ವಾಸನೆ ಎಂಬುದು ಪ್ರತಿಯೊಬ್ಬರಿಗೂ ಮುಜುಗರ ತರಿಸುವ ಸಂಗತಿ. ದಂತ ಕ್ಷಯದಿಂದ ಹಿಡಿದು, ವಸಡು ಕಾಯಿಲೆ, ಗ್ಯಾಸ್ಟ್ರಿಕ್ ಸಮಸ್ಯೆ ಶ್ವಾಸಕೋಶದ ಸಮಸ್ಯೆ ಮುಂತಾದ ಕಾರಣಗಳಿಂದ ಬಾಯಿ ವಾಸನೆ ಉಂಟಾಗಬಹುದು.**

■ ಡಾ. ಮುರಲಿ ಮೋಹನ್ ಚೂಂತಾರು

ಬಾಯಿ ನಮ್ಮ ದೇಹದ ಹೆಬ್ಬಾಗಿಲು ಇದ್ದಂತೆ. ಬಾಯಿಯಲ್ಲಿ ನೂರಾರು ರೋಗಗಳ ಲಕ್ಷಣಗಳು ನಾಲಗೆಯ ಕೆಲಭಾಗ, ತುಟಿಗಳಲ್ಲಿ ವಸಡುಗಳಲ್ಲಿ, ಹಲ್ಲುಗಳಲ್ಲಿ ಆರಂಭಿಕ ಹಂತದಲ್ಲಿಯೇ ಕಾಣಿಸಿಕೊಳ್ಳುವುದರಿಂದ ಬಾಯಿಯನ್ನು ‘ವೈದ್ಯ ಲೋಕದ ವೈದ್ಯರ ಕನ್ನಡಿ’ ಎಂದೂ ಕರೆಯುತ್ತಾರೆ. ಬಾಯಿ ಎನ್ನುವುದು ಬ್ಯಾಕ್ಟೀರಿಯಾಗಳ ಗುಂಡಿ ಇದ್ದಂತೆ. ಆರೋಗ್ಯದಲ್ಲಿ ಸ್ವಲ್ಪ ಏರುಪೇರಾದಲ್ಲಿ, ಜ್ವರ ಬಂದಲ್ಲಿ ನಿರ್ಜಲೀಕರಣವಾದಲ್ಲಿ ಬಾಯಿಯಲ್ಲಿ ಎಲ್ಲವೂ ಕನ್ನಡಿಯಂತೆ ಪ್ರತಿಬಿಂಬಿಸುತ್ತದೆ. ಈ ನಿಟ್ಟಿನಲ್ಲಿ ಬಾಯಿಯ ಆರೋಗ್ಯವನ್ನು ಹತೋಟಿಯಲ್ಲಿಡುವುದು ಅತೀ ಅವಶ್ಯಕ. ಈ ಕಾರಣದಿಂದಲೇ ಮೌತ್ ವಾಶ್ ಬಳಸಿ ಬಾಯಿಯಲ್ಲಿನ ಕೀಟಾಣುಗಳನ್ನು ನಿಯಂತ್ರಿಸಿ, ರೋಗ ಬಾರದಂತೆ ಎಚ್ಚರವಹಿಸುವುದರಲ್ಲಿಯೇ ಜಾಣತನ ಅಡಗಿದೆ.

ಮೌತ್‌ವಾಶ್ ಎನ್ನುವುದು ಹಲ್ಲುಜ್ಜುವ ಪ್ರಕ್ರಿಯೆಗೆ ಪೂರಕವಾಗಬೇಕೇ ಹೊರತು, ಹಲ್ಲುಜ್ಜುವ ಪ್ರಕ್ರಿಯೆಗೆ ಬದಲಿ ವ್ಯವಸ್ಥೆಯಾಗಬಾರದು. ವೈದ್ಯರು ಸೂಚಿಸಿದ ಮೌತ್‌ವಾಶ್ ಬಳಸಿ ಬಾಯಿಯ ಆರೋಗ್ಯವನ್ನು ಕಾಪಾಡಿಕೊಳ್ಳುವುದಲ್ಲಿಯೇ ನಮ್ಮೆಲ್ಲರ ಆರೋಗ್ಯದ ಹಿತ ಅಡಗಿದೆ.

### ಅಸಹ್ಯ ತರಿಸುವ ಬಾಯಿ ವಾಸನೆ

ಬಾಯಿ ವಾಸನೆ ಎನ್ನುವುದು ಪ್ರತಿಯೊಬ್ಬ ಮನುಷ್ಯನ ಜೀವನದಲ್ಲಿ ಅನುಭವಿಸುವಂತಹ ಮುಜುಗರ ನೀಡುವಂತಹ ಒಂದು ದೈಹಿಕ ಪರಿಸ್ಥಿತಿ. ಬಾಯಿ ವಾಸನೆಗೆ ಹತ್ತು ಹಲವು ಕಾರಣಗಳಿವೆ. ಬಾಯಿಯೊಳಗಿನ ದಂತ ಕ್ಷಯದಿಂದ ಹಿಡಿದು, ವಸಡು ಕಾಯಿಲೆ, ದಂತಗಾರೆ, ದಂತಪಾಚಿ, ಗ್ಯಾಸ್ಟ್ರಿಕ್ ಸಮಸ್ಯೆ ಶ್ವಾಸಕೋಶದ ಸಮಸ್ಯೆ ಮುಂತಾದ ಹತ್ತು ಹಲವು ಕಾರಣಗಳಿಂದ ಬಾಯಿ